# ‘ಒಳ್ಳೆ’ ಆರ್ಮ್‌ಸ್ಟ್ರಾಂಗ್!




ಲ್ಯಾನ್ಸ್ ಎಡ್ವರ್ಡ್ ಆರ್ಮ್‌ಸ್ಟ್ರಾಂಗ್! ಪ್ರಪಂಚದಾದ್ಯಂತ ಸೈಕ್ಲಿಂಗ್ ಪ್ರೇಮಿಗಳ ಆರಾಧ್ಯನಾಗಿದ್ದ ವಿಶ್ವ ಚಾಂಪಿಯನ್. 1999ರಿಂದ 2005ರ ವರೆಗೆ ಸತತ ಏಳು ವರ್ಷಗಳ ಕಾಲ ಜಗತ್ತಿನ ಪ್ರತಿಷ್ಠಿತ ‘ಟೂರ್ ಡಿ. ಫ್ರಾನ್ಸ್’ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ಗಳಲ್ಲಿ ಪ್ರಶಸ್ತಿಗೆದ್ದು ವಿಶ್ವದ ನಂಬರ್ ಒನ್ ಸೈಕ್ಲಿಸ್ಟ್ ಆಗಿದ್ದಾತ. 2000ದಲ್ಲಿ ಸಿಡ್ನಿ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಕೂಡಾ ಗೆದ್ದಿದ್ದ. ಅತ್ಯಂತ ಕಡಿಮೆ ಅವಧಿಯಲ್ಲಿ ಸೈಕ್ಲಿಂಗ್ ಜಗತ್ತಿನ ‘ಸಾರ್ವಭೌಮ’ ಎಂದು ಗುರುತಿಸಿಕೊಂಡ ಈ ಅಮೆರಿಕದ ಸೈಕ್ಲಿಸ್ಟ್ ಈಗ ಕ್ರೀಡಾಲೋಕದ ಅತಿದೊಡ್ಡ ಖಳನಾಯಕನಾಗಿ ಹೊರಬಿದ್ದಿದ್ದಾನೆ!

ವಿವಿಧ ಕ್ರೀಡೆಗಳಲ್ಲಿ ಉದ್ದೀಪನ ಮದ್ದು ಸೇವಿಸಿ ಸಿಕ್ಕು ಬಿದ್ದು ಪದಕ ಕಳೆದುಕೊಂಡವರೆಷ್ಟೋ ಮಂದಿ. ಆದರೆ ಇವರ್‍ಯಾರೂ ಆರ್ಮ್‌ಸ್ಟ್ರಾಂಗ್‌ನಷ್ಟು ದೀರ್ಘ ಕಾಲ ಸತತವಾಗಿ ವಂಚಿಸಿ ಗೆದ್ದವರಲ್ಲ. ಕೆಲವರು ಗೊತ್ತಿಲ್ಲದೆ ಆಹಾರದಲ್ಲಿ ಉದ್ದೀಪನ ಮದ್ದು ಸೇವಿಸಿದವರು. ಇನ್ನು ಕೆಲವರು ಸಿಕ್ಕಿ ಬೀಳಲಿಕ್ಕಿಲ್ಲ ಎಂಬ ಭಂಡ ಧೈರ್ಯದಿಂದ ಮದ್ದು ಸೇವಿಸಿದವರು. ಆದರೆ ಆರ್ಮ್‌ಸ್ಟ್ರಾಂಗ್ ವಂಚಕರಲ್ಲಿ ವಂಚಕ. ಮದ್ದು ಸೇವಿಸಿಯೂ ಸಂಘಟಕರನ್ನು ಹೇಗೆ ಯಾಮಾರಿಸಬಹುದು ಎಂಬುದನ್ನು ತಿಳಿಸಿಕೊಟ್ಟ ಚಾಣಾಕ್ಷ ವೈದ್ಯ!

‘2000ನೇ ಇಸವಿಯ ಜೂನ್ ತಿಂಗಳಲ್ಲಿ ಸೈಕ್ಲಿಂಗ್ ಚಾಂಪಿಯನ್ ಲ್ಯಾನ್ಸ್ ಆರ್ಮ್‌ಸ್ಟ್ರಾಂಗ್ ಕೆಲ ಸ್ಪರ್ಧಿಗಳ ಜೊತೆಗೂಡಿ ಸ್ಪೇನ್‌ಗೆ ಪ್ರಯಾಣ ಬೆಳೆಸಿದರು. ಅಲ್ಲಿನ ಕೊಠಡಿಯೊಂದರಲ್ಲಿ ಆತನ ದೇಹದಿಂದ ತೆಗೆದ ರಕ್ತವನ್ನು ಬಾಟಲಿಯಲ್ಲಿ ಸಂಗ್ರಹಿಸಿ ಎತ್ತಿಡಲಾಯಿತು. ಮದ್ದು ಪರೀಕ್ಷೆ ಮುಗಿದ ನಂತರ ಜುಲೈಯಲ್ಲಿ ನಡೆದ ಟೂರ್ ಡಿ ಫ್ರಾನ್ಸ್ ಸೈಕ್ಲಿಂಗ್ ಚಾಂಪಿಯನ್‌ಷಿಪ್ ಸ್ಪರ್ಧೆಯ ವೇಳೆ ಆರ್ಮ್‌ಸ್ಟ್ರಾಂಗ್ ದೇಹಕ್ಕೆ ಮತ್ತೆ ಆ ರಕ್ತ ಸೇರ್ಪಡೆ ಮಾಡಲಾಯಿತು...’– ಹೀಗೆಂದು ಮಾಧ್ಯಮಗಳು ಈತನ ವಂಚನೆಯ ವಿಧಾನವನ್ನು ಬಯಲಿಗೆ ತಂದಿವೆ.

ಚಿಕ್ಕ ವಯಸ್ಸಿನಲ್ಲಿಯೇ ದೊಡ್ಡ ಸಾಧನೆ ತನ್ನದಾಗಿಸಿಕೊಂಡ ಆರ್ಮ್‌ಸ್ಟ್ರಾಂಗ್, ಅಷ್ಟೇ ಬೇಗ ಕ್ರೀಡಾ ಜಗತ್ತಿನ ಪಾಲಿಗೆ ಖಳನಾಯಕನಾಗಿದ್ದಾನೆ. ಏಳು ಬಾರಿಯ ‘ಟೂರ್ ಡಿ ಫ್ರಾನ್ಸ್’ ವಿಜೇತನ ಸಾಧನೆಗಳು ಈಗ ಕಪ್ಪುಪಟ್ಟಿಗೆ ಸೇರಿವೆ. ಸೈಕ್ಲಿಂಗ್ ಚಾಂಪಿಯನ್ ಚಾಕಚಕ್ಯತೆಯಿಂದ ಮಾಡಿದ ಮೋಸದ ಕುರಿತು ಅಮೆರಿಕದ ಉದ್ದೀಪನ ಮದ್ದು ತಡೆ ಘಟಕವು ‘ಕ್ರೀಡೆಯ ಇತಿಹಾಸದಲ್ಲಿ ಇಷ್ಟೊಂದು ವ್ಯವಸ್ಥಿತವಾಗಿ ವಂಚಿಸುವ ಸೂಕ್ಷ್ಮ ಬುದ್ಧಿ ಇನ್ನೊಬ್ಬರಿಗೆ ಬರಲು ಸಾಧ್ಯವೇ ಇಲ್ಲ’ ಎಂದು ಅಚ್ಚರಿ ವ್ಯಕ್ತಪಡಿಸಿದೆ.

ಟೂರ್ ಡಿ ಫ್ರಾನ್ಸ್ ಕೂಡಾ ಅಧಿಕೃತವಾಗಿ ದಾಖಲೆ ಪುಸ್ತಕದಿಂದ ಈ ಹೆಸರನ್ನು ತೆಗೆದು ಹಾಕಲು ನಿರ್ಧರಿಸಿದೆ. ಸೈಕ್ಲಿಂಗ್ ತಂಡದ ಸಹ ಸದಸ್ಯರ ಮೇಲೂ ಮದ್ದು ಸೇವಿಸಲು ಒತ್ತಡ ಹೇರಿದ್ದ ಆರ್ಮ್‌ಸ್ಟ್ರಾಂಗ್‌ನನ್ನು ‘ಉದ್ದೀಪನ ಮದ್ದು ಮಾಫಿಯಾದ ನಾಯಕ’ ಎಂದು ಮದ್ದು ತಡೆ ಘಟಕ ಜರಿದಿದೆ. ಅಂತರರಾಷ್ಟ್ರೀಯ ಸೈಕ್ಲಿಂಗ್ ಒಕ್ಕೂಟವು ಈತನಿಗೆ ಆಜೀವ ನಿಷೇಧ ಶಿಕ್ಷೆಯ ‘ಶಿಕ್ಷೆ’ ಪ್ರಕಟಿಸಿದೆ. ಈತನನ್ನು ಮಾಡೆಲಿಂಗ್‌ಗೆ ಬಳಸಿ ಕೋಟ್ಯಂತರ ಡಾಲರ್ ಸಂಭಾವನೆ ಕೊಡುತ್ತಿದ್ದ ಕಂಪೆನಿಗಳೆಲ್ಲ ಈಗ ಹಿಂಜರಿದಿದ್ದು, ಈತನ ಜಾಹೀರಾತು ಮೌಲ್ಯವೂ ದಿಢೀರನೆ ಕೆಳಕ್ಕೆ ಕುಸಿದಿದೆ.

ಕ್ರೀಡೆ ಶುದ್ಧ ರೂಪದಲ್ಲಿ ಉಳಿಯದಿದ್ದರೆ ಕ್ರೀಡಾಭಿಮಾನಿಗಳ ಅಭಿಮಾನವೂ ಹೆಚ್ಚು ಕಾಲ ಉಳಿಯುವುದಿಲ್ಲ. ಉದ್ದೀಪನ ಮದ್ದು ಸೇವಿಸಿ ಸ್ಪರ್ಧೆಯಲ್ಲಿ ಪದಕ ಗೆಲ್ಲಲು ಹೊರಡುವ ಎಲ್ಲರಿಗೂ ಇದೊಂದು ಪಾಠವಾಗಬೇಕು.

■ ಪ್ರಮೋದ್ ಜಿ.ಕೆ